# ವಾರ್ಡ್ ಸಭೆ ಸಂಖ್ಯೆ.-

ದಿನಾಂಕ:21.07.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.74 ಶಕ್ತಿ ಗಣಪತಿನಗರ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಚಂದ್ರಶೇಖರ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.74 ಶಕ್ತಿ ಗಣಪತಿನಗರ **(ಅಧ್ಯಕ್ಷರು)**
2. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.74 ಶಕ್ತಿ ಗಣಪತಿನಗರ **(ಕಾರ್ಯದರ್ಶಿ)**
3. ಡಾ॥ ಕುಸುಮ ಆರೋಗ್ಯ ವೈಧ್ಯಾಧಿಕಾರಿಗಳು ಕಮಲಾನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
4. ಶ್ರೀ ಜಿ.ಆರ್ ಗೋವಿಂದರಾಜು ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.74 ಶಕ್ತಿ ಗಣಪತಿನಗರ.
5. ಶ್ರೀ ಜಕಾಬ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.74 ಶಕ್ತಿ ಗಣಪತಿನಗರ.
6. ಶ್ರೀ ಪಾರ್ಥಸಾರಥಿ ಕಂದಾಯ ಪರಿವೀಕ್ಷಕರು ವಾರ್ಡ್.ಸಂಖ್ಯೆ.74 ಶಕ್ತಿ ಗಣಪತಿನಗರ.

ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು.

| ಕ್ರ. ಸಂ | ವಿವರಣೆ | ಕ್ರಮ |
|---|---|---|
| 7. | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 8. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 9. | ಪ್ರಸ್ತುತ ಬಿ.ಬಿ.ಎಂ.ಪಿಯಲ್ಲಿ ಹೊಸದಾಗಿ ವಾರ್ಡ್ ವಿಂಗಡಣೆಯಾಗಿರುವುದುರಿಂದ ಹಾಲಿ ಇರುವ ವಾರ್ಡ್ ಕಛೇರಿ ವಾರ್ಡ್ 56 ಕ್ಕೆ ಹೋಗುವುದರಿಂದ ಹೊಸದಾಗಿ ವಾರ್ಡ್ ಕಛೇರಿ ನಿರ್ಮಾಣ ಮಾಡುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಸದರಿ ಕಛೇರಿಯನ್ನು ನಿರ್ಮಿಸಲು ಗುಡ್ಡೆಗಣಪತಿ ಉದ್ಯಾನ ವನದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲು ವಾರ್ಡ್ ಸಭೆಯಲ್ಲಿ ತಿರ್ಮಾನಿಸಲಾಯಿತು. | ಕಾಮಗಾರಿ ಇಲಾಖೆ |
| 10 | ವಾರ್ಡ್ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳನ್ನು ನಿರ್ವಹಣೆ ಮಾಡಲುಯ ಗುತ್ತಿಗೆ ದಾರರನ್ನು ನೇಮಿಸಲಾಗಿದೆಯೇ ಎಂಬುವುದಕ್ಕೆ ಗುತ್ತಿಗೆ ದಾರರ ವಿವರಗಳನ್ನು ಸಭೆಗೆ ತಿಳಿಸಲು ಶ್ರೀ ಹೇಮಂತ್ ರವರು ಕೋರಿರುತ್ತಾರೆ. | ಕಾಮಗಾರಿ ಇಲಾಖೆ |
| 11. | ಕಸ್ತೂರಿ ಬಡಾವಣೆಯ ಪೈಪ್ ಲೈನ್ ಬಳಿ ಇರುವ ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು ಸಮಯಕ್ಕೆ ಸರಿಯಾಗಿ ತೆರೆಯದೆ ಇರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದರಿಂದ ಸದರಿ ಸ್ಥಾವರದ ನಿರ್ವಹಣೆ ಮಾಡುತ್ತಿರುವವರ ವಿವರಗಳನ್ನು ಸಭೆಗೆ ತಿಳಿಸಲು ಶ್ರೀ ಹೇಮಂತ್ ರವರು ಕೋರಿರುತ್ತಾರೆ. | ಕಾಮಗಾರಿ ಇಲಾಖೆ |
| 12 | ಚಂದ್ರಪ್ಪ ಬಡಾವಣೆಯ ಮುಖ್ಯರಸ್ತೆಯಲ್ಲಿರುವ ದೀನ ಸೇವ ಶಾಲೆಯ ಬಳಿ ಇರುವ ಕೋಳಿ ಮಾಂಸದ ಅಂಗಡಿಯವರು ಪರಿಕರಗಳನ್ನು ರಸ್ತೆಯಲ್ಲಿ ಇಡುವುದರಿಂದ ಶಾಲಾ ಮಕ್ಕಳು ಮತ್ತು ಸಾರ್ವಜನಿಕರಿಗೆ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದರಿಂದ ಕೂಡಲೇ ಸರಿ ಪರಿಕರಗಳನ್ನು ತೆರವುಗೊಳಿಸಲು ಶ್ರೀ ಹೇಮಂತ್ ರವರು ಸಭೆಗೆ ಕೋರಿರುತ್ತಾರೆ. | ಪಶುಸಂಗೋಪನ ಇಲಾಖೆ |
| 13. | ವಾರ್ಡ್‌ನಲ್ಲಿ ನಿವಾಸಿಗಳ ಮನೆಗಳಿಗೆ ನೀಡಿರುವ ವಿದ್ಯತ್ ಸಂಪರ್ಕವನ್ನು ಸೂಕ್ತ ಮಾಹಿತಿ ಇಲ್ಲದೆ ಬೆಸ್ಕಾಂ ಅಧಿಕಾರಿಗಳು ಕಡಿತಗೊಳಿಸಿರುವುದಕ್ಕೆ ಕಾರಣವನ್ನು ತಿಳಿಸಲು ಸಭೆಗೆ ಶ್ರೀ ಹೇಮಂತರವರು ಕೋರಿರುತ್ತಾರೆ. | ಸ.ಅ,ವಿದ್ಯುತ್ |

**ಕಾರ್ಯದರ್ಶಿ**

22/7/22

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.74
ಶಕ್ತಿ ಗಣಪತಿನಗರ